ಸಂಚಿಕೆ ೯
ಸಪ್ಟೆಂಬರ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್




ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್

# ಸಂಚಿಕೆ ೯
# ಸೆಪ್ಟೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ - ಪುಟ ೧
ಪೋಷಕರ ಅಂಕಣ - ಪುಟ ೨
ಹಬ್ಬ ಪುಟ – ೩
ಅ ಆ ಅಡ್ವೆಂಚರ್- ಪುಟ ೪
ಸಂದರ್ಶನ - ಪುಟ ೫ -೭
ಪ್ರವಾಸ - ಪುಟ ೮
ಚಿಣ್ಣರ ಚಿತ್ರ ಕಲೆ - ಪುಟ ೯-೧೦
ನಾ ಕಂಡ ಸಿನಿಮಾ - ಪುಟ ೧೧
ಪದ ಹುಡುಕೋಣ ಪುಟ - ೧೨
ಪತ್ರ ಮಾಲೆ – ಮೂರ್ತಿ ತಾತ - ಪುಟ ೧೩-೧೪



## ಸಂಪಾದಕೀಯ: ರಜನೀ ಮಹೇಶ್

ನಾವು ಯಾವುದೇ ಕಾರ್ಯ ಮಾಡುವಾಗ ನಮ್ಮ ವಿಘ್ನಗಳನ್ನು ಸಂಕಷ್ಟಗಳನ್ನು ಪರಿಹರಿಸಲು ನಮ್ಮ ಸಂಸ್ಕೃತಿಯಲ್ಲಿ ನಾವು ಕಂಡುಕೊಂಡ ದೇವರೇ ಗಣೇಶ. ನಾನು ಚಿಕ್ಕವಳಾಗಿದ್ದಾಗ ಹಬ್ಬ ಎಂದರೆ ದೇವಸ್ಥಾನ, ಹೊಸ ಬಟ್ಟೆ, ಬಗೆಬಗೆಯ ಅಡುಗೆ, ರುಚಿ ರುಚಿ ತಿಂಡಿ, ಪೂಜೆ ಪುನಸ್ಕಾರಗಳು ಅಷ್ಟೆ. ಆದ್ರೆ ಈಗ ಈ ಹಬ್ಬಗಳ ಅರ್ಥ, ಮಹತ್ವ ತಿಳಿಯುವ ಬಗ್ಗೆ ಕುತೂಹಲದಿಂದ ಹಲವಾರು ವಿಷಯಗಳು ನನ್ನ ಗಮನ ಸೆಳೆದವು. ನಾನು ಓದಿದ ಕೆಲವೊಂದು ವಿಚಾರಗಳನ್ನು ಇಲ್ಲಿ ಹಂಚಿಕೊಳ್ಳಬೇಕು ಅನ್ನಿಸ್ತು.

ಎಲ್ಲ ಪೂಜೆಗೂ ಮುನ್ನ ವಿಘ್ನೇಶ್ವರನನ್ನು ಪೂಜಿಸುವುದು ವಾಡಿಕೆ. ಆದರೆ ಗೌರೀ ಪುತ್ರ ತನಗಿಂತ ಮೊದಲು ತನ್ನ ತಾಯಿ ಆದಿಶಕ್ತಿಯನ್ನು ಪೂಜಿಸಬೇಕು ಎಂದು ತಿಳಿಸಿದ ಸಂದರ್ಭ ಈ ಗೌರೀ ಗಣೇಶ ಹಬ್ಬ. ನಾನು ಎಲ್ಲರಿಗೂ ಮೊದಲಾದರೂ ನನಗಿಂತ ಮೊದಲು ನನ್ನ ತಾಯಿ – ಎಂಬ ಮಾತೃ ಭಕ್ತಿಯನ್ನು ನಮಗೆ ಕಲಿಸಿ ಕೊಡುತ್ತದೆ.

ಈ ಗೌರೀ ಗಣೇಶ ಹಬ್ಬ ನಮ್ಮನ್ನು ಪ್ರಕೃತಿಯ ಹತ್ತಿರ ಕರೆದೊಯ್ಯುತ್ತದೆ. ಮಣ್ಣಿನಲ್ಲಿ ಮಾಡಿದ ಗೌರೀ, ಗಣೇಶನನ್ನು ಮತ್ತೆ ನೀರಿಗೆ ಬಿಡುವ ಮೂಲಕ, ನಾವು ಎಲ್ಲಿಂದ ಬಂದೆವೋ, ಅಲ್ಲಿಗೆ ಸೇರಬೇಕು ಎಂಬುದನ್ನು ತಿಳಿ ಹೇಳುತ್ತದೆ.

ಗಣಪತಿಗೆ ಆನೆಯ ಮುಖ, ಅಗಲವಾದ ಕಿವಿ, ದೊಡ್ಡ ಹೊಟ್ಟೆ ಹೀಗೆ ಅಸಹಜವಾದ ರೂಪ ಜೊತೆಗೆ ವಾಹನವಾಗಿ ಒಂದು ಪುಟ್ಟ ಇಲಿ. ಅಷ್ಟು ಸಣ್ಣ ಇಲಿ , ಇಷ್ಟು ದೊಡ್ಡ ಗಣೇಶನನ್ನು ಹೇಗೆ ಹೊತ್ತೊಯ್ಯುತ್ತದೆ ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತದೆ. ಇದು ನಮಗೆ ಮೂರ್ತಿ ಚಿಕ್ಕದಾದರೂ, ನಾವು ಏನನ್ನೂ ಸಾಧಿಸಬಹುದು ಎನ್ನುವುದನ್ನು ತಿಳಿಸುತ್ತದೆ. ವಿಚಿತ್ರ ರೂಪ ಪಡೆದರೂ ಈತನಿಗೆ ಮುಕ್ಕೋಟಿ ದೇವರಲ್ಲಿ ಅಗ್ರ ಸ್ಥಾನ. ಆತನ ವಿಕಾರ ರೂಪ, ಸ್ಫೂರ್ತಿ ಶಕ್ತಿ ಬಾಹ್ಯ ಸೌಂದರ್ಯದಲ್ಲಿಲ್ಲ ಬದಲಾಗಿ ನಮ್ಮ ಅಂತಃಶಕ್ತಿಯಲ್ಲಿದೆ ಎಂಬುದನ್ನು ಎತ್ತಿ ತೋರಿಸುತ್ತಿದೆ. ವಿಕಾರತೆಯನ್ನು ಗೌಣವಾಗಿಸಿ ಕುಶಾಗ್ರಮತಿಗೆ ಹೆಚ್ಚು ಆದ್ಯತೆ ನೀಡಿ ಎಂದು ಜಗಕೆಲ್ಲ ಸಂದೇಶ ನೀಡುತ್ತಾನೆ.ಚೆಲುವಿಲ್ಲದಿದ್ದರೂ ಬುದ್ದಿಯಿಂದ ಎಲ್ಲರ ಗಮನ ಸೆಳೆಯಬಹುದು. ರೂಪ ಗೌಣ.ಸದ್ಗುಣ ಬುದ್ಧಿ ಪ್ರಧಾನ. ಎಂಬುದನ್ನು ಸಾರಿ ಹೇಳುತ್ತಾನೆ.

ಗಣಪತಿಗೆ ಸಿದ್ಧಿ – ಬುದ್ಧಿ ಎಂಬ ಹೆಂಡತಿಯರು ಇದ್ದಾರೆ. ಆದರೆ ಗಣೇಶ ಬ್ರಹ್ಮಚಾರಿ ಅಂತ ಕೂಡ ನಾವು ಕೇಳಿದ್ದೇವೆ. ಗಣೇಶ ವಿದ್ಯೆಯ ಅಧಿಪತಿ. ಕಲಿಕೆ ಮತ್ತು ಬ್ರಹ್ಮಚರ್ಯಕ್ಕೂ , ಬುದ್ಧಿ ಮತ್ತಿ ಸಿದ್ಧಿಗೂ ಇರುವ ಸಂಬಂಧ ಮೊದಲು ನಮಗೆ ಅರ್ಥ ಆಗಬೇಕು. ಆಗ ತಿಳಿಯುತ್ತೆ ಬ್ರಹ್ಮಚರ್ಯ ಮತ್ತು ಇಬ್ಬರು ಹೆಂಡತಿಯರ ಒಳಾರ್ಥ.

ಕೊನೆಯದಾಗಿ ಕಲಿಯಬೇಕಾದದ್ದು ಜೀವನದಲ್ಲಿ ಸಾಮರಸ್ಯ. ಇದನ್ನು ನಾವು ಗಣೇಶನ ಕುಟುಂಬದಿಂದಲೇ ಕಲಿಯಬೇಕು. ಶಿವನ ಕೊರಳ ಹಾರ ಹಾವು, ಗಣಪತಿಯ ವಾಹನ ಇಲಿ. ಪಾರ್ವತಿಯು ಸಿಂಹವಾಹನದವಳು. ಅಲ್ಲೂ ವೈರ. ಇನ್ನು ಸುಬ್ರಹ್ಮಣ್ಯನ ವಾಹನ ನವಿಲು, ಶಿವನ ಕೊರಳ ಹಾವು ಇಬ್ಬರಿಗೂ ವೈರ. ಇಷ್ಟೆಲ್ಲಾ ವೈರದ ನಡುವೆ ನಾವು ಕಾಣುವುದು ಶಿವ ಪಾರ್ವತಿಯರ ಸಾಮರಸ್ಯದ ಆದರ್ಶ ಕುಟುಂಬ.

ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುವ ಜೊತೆಗೆ ಮಕ್ಕಳಿಗೆ ಇದರಲ್ಲಿ ಸಿಗುವ ಮೌಲ್ಯಗಳನ್ನು ತಿಳಿಹೇಳೋಣ ಜೊತೆಗೆ ನಾವೂ ತಿಳಿದುಕೊಳ್ಳೋಣ.



ರಜನೀ



ಪ್ರಮಿತಿ



ಅನನ್ಯ



ಮೇಘನ



ಇಂಚರ



*ಹಚ್ಚೇವು ಕನ್ನಡದ ದೀಪ...*

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com



## ಪೋಷಕರ ಅಂಕಣ : ಉಷಾ ನಂದೀಶ್

ಸಮಯ ತುಂಬಾ ಬೇಗ ಹೋಗುತ್ತಿರುವಂತಿದೆ. ಐದು ವರ್ಷಗಳು ಹೇಗೆ ಕಳೆದುಹೋಯಿತು ಎಂದು ನಂಬಲು ಸಾಧ್ಯವೇ ಇಲ್ಲ. ನನ್ನ ಮುದ್ದು ಕಂದ ಸೋಹಾನ್ ಆಗಲೇ ಕಿಂಡರ್ಗಾರ್ಟನ್ ಗೆ ಹೋಗಲಾರಂಭಿಸಿದ್ದಾನೆ. ಅವನು ಒಂದು ಹೊಸ ಸುಂದರ ಪ್ರಪಂಚಕ್ಕೆ ಕಾಲಿಡುತ್ತಿದ್ದಾನೆ ಎಂಬ ಸಂತಸ ಒಂದೆಡೆಯಾದರೆ, ಮತ್ತೊಂದೆಡೆ ನನ್ನ ಪುಟ್ಟ ಕಂದ ಈಗ ದೊಡ್ಡವನಾಗುತ್ತಿದ್ದಾನೆ, ಇನ್ನು ಮುಂದೆ ಹೆಚ್ಚು ಸಮಯ ನನ್ನಿಂದ ದೂರವಿರುತ್ತಾನೆಂದು ನೆನೆದು ಮನಸ್ಸಿಗೆ ಏನೋ ಒಂದು ರೀತಿ ತಳಮಳ. ನನಗೆ ಅವನು ಈಗಷ್ಟೇ ಹುಟ್ಟಿದ ಹಾಗೆ ಇದೆ. ಅವನ ಆ ಮೊದಲ ಅಳು, ನಗು ಎಲ್ಲವು ಹಾಗೆಯೇ ಕಣ್ಣಮುಂದೆ ಬರುತ್ತಿದೆ. ಅಂದಿನಿಂದ ಇಂದಿನವರೆಗು ನನ್ನ ಪುಟ್ಟ ಕಂದಮ್ಮನ ಜೊತೆಯಲ್ಲಿ ಕಳೆದಿರುವ ಕ್ಷಣಗಳು ಅತಿ ಅಮೂಲ್ಯವಾದದ್ದು. ಅದೇ ರೀತಿ ಕೆಲವು ಬಾರಿ ಅವನ ತುಂಟ ತರಲೆ ಬುದ್ಧಿಗಳಿಂದ ಬೇಸತ್ತು ಎಷ್ಟು ಬೇಗ ಅವನು ದೊಡ್ಡವನಾಗಿ ಶಾಲೆಗೆ ಹೋಗಲಾರಂಭಿಸುತ್ತಾನೋ ಎಂದು ಅನಿಸಿದ್ದು ಉಂಟು.

ಈಗ ಆ ಸಮಯ ಬಂದೇ ಬಿಟ್ಟಿತು. ಅವನ ಶಾಲೆಯ ಓಪನ್ ಹೌಸ್ ದಿನದಂದು ತನ್ನ ತರಗತಿಯನ್ನು ಕಂಡು ತುಂಬಾ ಸಂತಸಪಟ್ಟನು. ಅಲ್ಲಿ ಅವನ ಇಷ್ಟದ ಡೈನೋಸಾರ್ ಟ್ಯಾಸ್, ಹಲವಾರು ಕಥೆ ಪುಸ್ತಕಗಳು, ಒಂದು ಪುಟ್ಟ ಮೀನು (ಅವರ ತರಗತಿಯ ಪೆಟ್, ಅದರ ಹೆಸರು ಪೆಂತರ್) ಹಾಗು ಇತರೆ ಎಲ್ಲವನ್ನು ಕಂಡು ತುಂಬಾ ಹರ್ಷಗೊಂಡನು. ಅಂದಿನಿಂದ ನಾವು ತುಂಬಾ ಕಾತರದಿಂದ ಶಾಲೆ ಪ್ರಾರಂಭವಾಗುವುದನ್ನು ಕಾಯುತ್ತಿದ್ದೆವು. ಅವನು ಮುಂಚೆ ಪ್ರೀಸ್ಕೂಲ್ ಗೆ ಹೋಗಲು ಕೆಲವು ಬಾರಿ ಅಳುತ್ತಿದ್ದುದುಂಟು, ಹೆಚ್ಚಿನ ಸಮಯ ನಮ್ಮೊಂದಿಗೇ ಇರಲು ಬಯಸುತ್ತಿದ್ದ. ಆದರೆ ಈಗ ಶಾಲೆಗೇ ತಡವಾಗುತ್ತಿದೆ ಎಂದ ತಕ್ಷಣ ಥಟ್ ಎಂದು ಎದ್ದು ತಯಾರಾಗುತ್ತಾನೆ.

ಪ್ರಾರಂಭದ ದಿನಗಳಲ್ಲಿ ಅವನು ಶಾಲೆಗೆ ಹೋದಮೇಲೆ, ಆ ಹೊಸ ಜಾಗದಲ್ಲಿ ಎಲ್ಲರೊಡನೆ ಹೇಗೆ ಬೆರೆಯುತ್ತಾನೋ, ಹೇಗೆ ಹೊಸ ಸ್ನೇಹಿತರನ್ನು ಮಾಡಿಕೊಳ್ಳುತ್ತಾನೋ, ಊಟ ಮಾಡಲು ಸಮಯ ಸಾಲುತ್ತದೆಯೋ ಎಂದು ಸ್ವಲ್ಪ ಚಿಂತಿಸುತ್ತಿದ್ದೆ. ಆದರೆ ಅವನು ಈ ಎಲ್ಲಾ ಹೊಸ ಬದಲಾವಣೆಯನ್ನು ಎಷ್ಟು ಸುಲಭವಾಗಿ ಸಂಬಾಳಿಸಿಕೊಂಡು ಹೋಗುತ್ತಿರುವುದನ್ನು ನೋಡಿ ಆಶ್ಚರ್ಯವಾಗುತ್ತಿದೆ. ನನ್ನ ಪುಟ್ಟ ಕಂದ ದಿನದಿಂದ ದಿನ ಮೆಚ್ಯುರ್ ಆಗಿತ್ತಿರುವುದನ್ನು ಕಂಡು ಹೆಮ್ಮೆಯಾಗುತ್ತಿದೆ. ಅವನ ಹೊಸ ಶಾಲೆ ಅವನಿಗೆ ಇಷ್ಟೊಂದು ಇಷ್ಟವಾಗುವುದೆಂದು ನಾನು ಅಂದುಕೊಂಡಿರಲಿಲ್ಲ.

ಈಗ ದಿನವೂ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳದ್ದೇ ಮಾತು. ಅಲ್ಲಿಯ ಯೋಗ, ಜಿಮ್ನ್ಯಾಸ್ಟಿಕ್, ಸಿಂಗಿಂಗ್ ಕ್ಲಾಸ್, ಪ್ಲೇ ಏರಿಯಾದಲ್ಲಿನ ಆಟ ಎಲ್ಲವನ್ನು ತುಂಬಾ ಎಂಜಾಯ್ ಮಾಡುತ್ತಿದ್ದಾನೆ. ಈ ಹೊಸ ಪಯಣ ಈಗಷ್ಟೇ ಪ್ರಾರಂಭವಾಗಿದೆ. ಮಕ್ಕಳ ಪ್ರತಿಯೊಂದು ಹೊಸ ಅಧ್ಯಾಯಗಳು ಪ್ರಾರಂಭವಾಗಲು ಎಲ್ಲಾ ತಂದೆ ತಾಯಿಯರಿಗೆ ಅವರ ಏಳಿಗೆಯನ್ನು ಕಂಡು ಆಗುವ ಅನುಭವವನ್ನು ವರ್ಣಿಸಲು ಅಸಾಧ್ಯ. ಸದಾ ಅವನ ಉಜ್ವಲ ಭವಿಷ್ಯದ ಕನಸನ್ನು ಕಾಣುತ್ತಾ ನನ್ನ ಕೆಲವು ಅನುಭವಗಳನ್ನು ನಿಮ್ಮೊಂದಿಗೆ ಈ ರೀತಿ ಹಂಚಿಕೊಳ್ಳುತ್ತಿದ್ದೇನೆ.





## ಗೌರಿ ಗಣೇಶ ಹಬ್ಬ : ಅನನ್ಯ ಮುಳುಬಾಗಿಲ್



ಗಣೇಶ ಹಬ್ಬವನ್ನು ಲೋಕಮಾನ್ಯ ತಿಲಕರು ಸಾರ್ವಜನಿಕ ಉತ್ಸವನ್ನಾಗಿ ಆಚರಿಸಲು ಕರೆ ನೀಡಿದ ಬಳಿಕ ಭಾರತದಾದ್ಯಂತ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಆದರೆ ಇದಕ್ಕೂ ಮುನ್ನ ಗೌರಿ ಗಣೇಶ ಹಬ್ಬ ಅಥವಾ ಗೌರಿಹಬ್ಬವನ್ನು ದಕ್ಷಿಣ ಭಾರತದಲ್ಲಿ ಮಾತ್ರ ವಿಶೇಷವಾಗಿ ಆಚರಿಸಲಾಗುತ್ತದೆ. ಈ ಹಬ್ಬ ವಿವಾಹಿತ ಸ್ತ್ರೀಯರಿಗೆ ಮೀಸಲಾಗಿದ್ದು ಸಾಮಾನ್ಯವಾಗಿ ಹಿಂದೂ ಕ್ಯಾಲೆಂಡರ ಪ್ರಕಾರ ಭಾದ್ರಪದ ಶುದ್ಧ ತೃತೀಯ ದಿನದಂದು (ಅಂದರೆ ಭಾದ್ರಪದ ಮಾಸದ ಮೊದಲ ಪಕ್ಷದ ಮೂರನೆಯ ದಿನ) ಆಚರಿಸಲಾಗುತ್ತದೆ.ಗೌರಿ ಹಬ್ಬದ ಮರುದಿನ, ಅಂದರೆ ಭಾದ್ರಪದ ಶುದ್ಧ ಚತುರ್ಥಿ (ಅಂದರೆ ಭಾದ್ರಪದ ಮಾಸದ ಮೊದಲ ಪಕ್ಷದ ನಾಲ್ಕನೆಯ ದಿನ) ಗಣೇಶ ಹಬ್ಬವನ್ನು ಆಚರಿಸಲಾಗುತ್ತದೆ. ಗೌರಿಹಬ್ಬವನ್ನು ವಿವಾಹಿತ ಮಹಿಳೆಯರು ಆಚರಿಸುವ ಹಬ್ಬವಾಗಿದ್ದು ಈ ದಿನದಂದು ತಮ್ಮ ಪತಿಯರಿಗೆ ಹೆಚ್ಚಿನ ಆಯಸ್ಸು, ಸಂತಾನಭಾಗ್ಯ ಮತ್ತು ಕುಟುಂಬಕ್ಕೆ ಸಮೃದ್ಧಿಯನ್ನು ಬೇಡಿಕೊಳ್ಳುತ್ತಾರೆ.

**ಗೌರಿ ಗಣೇಶ ಹಬ್ಬದ ಹಿಂದಿನ ದಂತಕಥೆ:**

ಗಣೇಶನ ಹುಟ್ಟಿನ ಬಗ್ಗೆ ವಿವಿಧ ಕಥೆಗಳಿದ್ದರೂ ಹೆಚ್ಚು ಜನಪ್ರಿಯವಾಗಿರುವ ಕಥೆ ಹೀಗಿದೆ: ಒಮ್ಮೆ ಕೈಲಾಸದಲ್ಲಿ ಪಾರ್ವತಿ ಒಂಟಿತನವನ್ನು ಅನುಭವಿಸುತ್ತಿದ್ದಳು. ತನ್ನ ಒಂಟಿತನವನ್ನು ಕಳೆಯಲು ಮಣ್ಣಿನಿಂದ ಚಿಕ್ಕ ಬಾಲಕನ ಪ್ರತಿಮೆಯೊಂದನ್ನು ಮಾಡಿ ಅದಕ್ಕೆ ಜೀವ ನೀಡಿದಳು. ಈ ಬಾಲಕನಿಗೆ ಗಣೇಶ ಎಂದು ನಾಮಕರಣ ಮಾಡಿ ತಾನು ಸ್ನಾನಕ್ಕೆ ಹೋದಾಗ ತನ್ನ ಸ್ನಾನಗೃಹದ ಬಾಗಿಲನ್ನು ಕಾವಲು ಕಾಯುವಂತೆ ಆಜ್ಞಾಪಿಸಿ ಒಳನಡೆದಳು.ಈ ಸಮಯದಲ್ಲಿ ಕೈಲಾಸಕ್ಕೆ ಆಗಮಿಸಿದ ಶಿವ ಒಳಗಡಿಯಿಡಲು ಯತ್ನಿಸಿದಾಗ ಬಾಲಕ ಗಣೇಶ ಶಿವನನ್ನು ತಡೆಯುತ್ತಾನೆ. ತನ್ನ ಮಗನೇ ಎಂದು ಗೊತ್ತಿಲ್ಲದೆ ಕೋಪಾವಿಷ್ಟನಾದ ಶಿವ ಬಾಲಕನ ರುಂಡವನ್ನು ಸಂಹರಿಸುತ್ತಾನೆ. ಬಳಿಕ ಸ್ನಾನ ಮುಗಿಸಿ ಹೊರಬಂದ ಪಾರ್ವತಿದೇವಿ ತನ್ನ ಮಗನ ಶವವನ್ನು ಕಂಡು ಅತ್ಯಂತ ದುಃಖಿತಳಾಗುತ್ತಾಳೆ. ದುಗುಡ ಮತ್ತು ಕೋಪಾವೇಶಗಳ ಭರದಲ್ಲಿ ಗಣೇಶನ ರುಂಡ ಎಲ್ಲಿಯೋ ಕಳೆದುಹೋಗುತ್ತದೆ. ಪಾರ್ವತಿಯನ್ನು ಶಾಂತಗೊಳಿಸಲು ಶಿವ ಬಾಲಕನಿಗೆ ಜೀವನೀಡುವ ವಾಗ್ದಾನ ನೀಡುತ್ತಾನೆ. ಆದರೆ ಕಳೆದ ರುಂಡ ಸಿಗದೇ ಇರುವ ಕಾರಣ ತನ್ನ ಬೆಂಬಲಿಗರಲ್ಲಿ ಕಾಡಿನ ಕಡೆಯಿಂದ ಯಾವ ಪ್ರಾಣಿ ಮೊದಲು ಬಂದಿತೋ ಅದನ್ನೇ ಗಣೇಶನಿಗೆ ಇರಿಸುವುದಾಗಿ ತಿಳಿಸುತ್ತಾನೆ. ಬಳಿಕ ಬಿಳಿಯ ಆನೆಯೊಂದು ಪ್ರಥಮವಾಗಿ ಪ್ರತ್ಯಕ್ಷವಾಗುತ್ತದೆ. ಅಂತೆಯೇ ಆನೆಯ ತಲೆಯನ್ನು ಬಾಲಕನ ಮುಂಡಕ್ಕೆ ಜೋಡಿಸಿ ಜೀವ ನೀಡಲಾಗುತ್ತದೆ. ಅಂತೆಯೇ ಗಣೇಶನ ಮುಂಡ ಮಾನವರಂತಿದ್ದರು ರುಂಡ ಮಾತ್ರ ಆನೆಯದ್ದಾದುದರಿಂದಲೇ ಗಜಮುಖನೆಂಬ ಹೆಸರು ಬಂದಿದೆ.

**ಗೌರಿ ಹಬ್ಬದ ಮಹತ್ವ:**

ಈ ಹಬ್ಬದ ದಿನದಂದು ಗೌರಿದೇವತೆಯನ್ನು ಭಕ್ತಿಭಾವದಿಂದ ಪೂಜಿಸಲಾಗುತ್ತದೆ. ದೇವಿಯರಲ್ಲಿಯೇ ಅತಿ ಶಕ್ತಿಶಾಲಿಯಾದ ಆದಿಶಕ್ತಿಯ ಅವತಾರವೆಂದು ನಂಬಲಾಗಿರುವ ಗೌರಿದೇವಿಯನ್ನು ಭಕ್ತಿಭಾವದಿಂದ ಆರಾಧಿಸುವ ಮೂಲಕ ದೇವಿನ ಅನುಗ್ರಹವನ್ನು ಪಡೆಯಬಹುದು ಎಂದು ನಂಬಲಾಗಿದೆ. ತನ್ನ ಭಕ್ತರಿಗೆ ಧೈರ್ಯ ಮತ್ತು ಅತೀವವಾದ ಸ್ಥೈರ್ಯವನ್ನು ನೀಡುವ ಮೂಲಕ ತನ್ನ ಭಕ್ತರನ್ನು ಸಬಲರನ್ನಾಗಿ ಮಾಡುವಳೆಂದು ಭಕ್ತರು ನಂಬುತ್ತಾರೆ.









ನಮ್ಮ ಮನೆಯ ಹಬ್ಬ.


## ಅ ಆ ಅಡ್ವೆಂಚರ್: ಪ್ರಮಿತಿ ಉಪಾಧ್ಯ




ಒಂದು ಚಿಟ್ಟೆಯ ಜೀವನ ಚಕ್ರ

## ರಂಗ್ ರಂಗ್ ರಂಗೋಲಿ





## ಸ್ನೇಹದ ಕಡಲಲ್ಲಿ... ನೆನೆಪಿನ ದೋಣಿಯಲಿ ....
## ಪಯಣಿಗ ಪ್ರಣಯರಾಜ ಅವರೊಂದಿಗೆ ಮಾತುಕತೆ : ಪ್ರಕೃತಿ ಉಪಾಧ್ಯ

ಪ್ರಣಯ ರಾಜ ಎಂದೇ ಖ್ಯಾತಿ ಗಳಿಸಿರುವ ಶ್ರೀನಾಥ್( ನಾರಾಯಣ ಸ್ವಾಮಿ) ಇವರು ರಾಮಸ್ವಾಮಿ ಶಾಸ್ತ್ರಿ ಮತ್ತು ಲಲಿತಾ ದಂಪತಿಗಳ ಮಗನಾಗಿ 28 ಡಿಸೆಂಬರ್ 1943 ಮೈಸೂರಿನಲ್ಲಿ ಜನಿಸಿದರು. ಇವರು ಚಿಕ್ಕ ವಯಸ್ಸಿನಲ್ಲೇ ರಂಗ ಭೂಮಿಯನ್ನು ಪ್ರವೇಶಿಸಿದರು. ಕನ್ನಡ ಚಿತ್ರರಂಗದ ಹೆಸರುವಾಸಿ ಪುಟ್ಟಣ್ಣ ಕಣಗಾಲ್ ಅವರ ಗರಡಿಯಲ್ಲಿ ಬೆಳೆದು ಬಂದರು.

"ಲಗ್ನ ಪತ್ರಿಕೆ" ಎಂಬ ಚಿತ್ರದ ಮೂಲಕ ಕನ್ನಡ ಚಿತ್ರ ರಂಗಕ್ಕೆ ಪ್ರವೇಶ ಮಾಡಿದ್ದಾರೆ. ನಂತರ ಮಧುರ ಮಿಲನ, ಶುಭ ಮಂಗಳ ಚಿತ್ರಗಳ ಮೂಲಕ ಶ್ರೀನಾಥ್ ಅವರು ಕನ್ನಡ ಚಿತ್ರ ರಂಗದಲ್ಲಿ ಗುರುತಿಸಿಕೊಂಡು ಪ್ರಣಯ ರಾಜನಾಗಿ ಹೊರ ಹೊಮ್ಮಿದ್ದಾರೆ.. ಶುಭ ಮಂಗಳ ಚಿತ್ರ ಇವರ ಜೀವನದ ಅತ್ಯುತ್ತಮವಾದ ಚಿತ್ರವಾಗಿ ಮಾರ್ಪಟ್ಟಿತು. ಕನ್ನಡ ದ ಶ್ರೇಷ್ಠ ನಟನಾಗಿ ಬೆಸುಗೆ ಚಲನಚಿತ್ರಕ್ಕೆ ಫಿಲ್ಮ್ ಫೇರ್ ಅವಾರ್ಡ್ ಬಂದಿದೆ. ಇವರೆಗೂ ಇವರು 200 ಕ್ಕಿಂತ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ.

ಬೆಸುಗೆ, ಮಾನಸ ಸರೋವರ, ಹೀಗೆ ಅನೇಕ ಚಿತ್ರಗಳಲ್ಲಿ ನಾಯಕರಾಗಿ ಶ್ರೀನಾಥ್ ಅವರು ಹೊರ ಹೊಮ್ಮಿದ್ದಾರೆ. ಕನ್ನಡ ಚಿತ್ರ ರಂಗದಲ್ಲಿ ಶ್ರೀನಾಥ್ ಮಂಜುಳಾ ಅವರು ಒಳ್ಳೆಯ ಜೊಡಿಯಾಗಿ ಹೆಸರು ಮಾಡಿದವರು. ಸುಮಾರು 35 ಚಿತ್ರಗಳಲ್ಲಿ ಈ ಜೋಡಿ ಅಭಿನಯಿಸಿದ್ದಾರೆ. ಇವರು ಕೇವಲ ಸಿನಿಮಾಗಳಲ್ಲಿ ಅಷ್ಟೇ ಅಲ್ಲದೆ ಕಿರುತೆರೆ, ಆದರ್ಶ ದಂಪತಿಗಳಲ್ಲಿ ಕಾಣಿಸಿಕೊಂಡು ಜನ ಮನ್ನಣೆಗೆ ಪಾತ್ರರಾಗಿದ್ದಾರೆ. ಇದು ಸದಾ ಕನ್ನಡಿಗರ ನೆನಪಿನಲ್ಲಿರುವ ಕಿರುತೆರೆಯ ಕಾರ್ಯಕ್ರಮ. ಇತ್ತೀಚೆಗೆ ಕನ್ನಡ ಚಲಚಿತ್ರರಂಗದಲ್ಲಿ 51 ವರ್ಷ ಪೂರೈಸಿದ ಅವರಿಗೆ "ಅಭಿನಯ ಮಾಣಿಕ್ಯ " ಎಂಬ ಬಿರುದು ದೊರಕಿದೆ.







**ನಾನು ಮತ್ತು ಡಾ.ಶ್ರೀನಾಥ್ ಅವರ ಸಂದರ್ಶನದ ಒಂದು ತುಣುಕು:**

**ಪ್ರಶ್ನೆ** : ನೀವು ಯಾವ ವಯಸ್ಸಲ್ಲಿ ಆಕ್ಟಿಂಗ್ ಶುರು ಮಾಡಿದ್ರಿ?

**ಉತ್ತರ** : ನನಗೆ ಏಳು ವರ್ಷ ೩ ತಿಂಗಳು ಆಗಿದ್ದಾಗ ಸುರು ಮಾಡಿದೆ. ನನ್ನ ಮೊದಲನೆ ನಾಟಕ "ವಿಶ್ವ ವ್ಯವಸ್ಥೆ". ನನ್ನ ತಾತನೆ ಬರೆದು, ನನ್ನ ಸ್ಟೇಜ್ ಮೇಲೆ ಬಿಟ್ಟರು. ಮನೆ ಎದುರು ದೇವಸ್ಥಾನ ಇತ್ತು, ಅದರ ಜಗುಲಿಯಲ್ಲಿ ನಾಟಕ ಆಡಿದ್ದು. ಸುತ್ತ ಮುತ್ತ ಇರೋ 300-400 ಜನ ಬಂದಿದ್ರು. ಅದೇ ನನ್ನ ಫಸ್ಟ್ ನಾಟಕ.

**ಪ್ರಶ್ನೆ** : ನೀವು ಆಕ್ಟಿಂಗ್ ಫೀಲ್ಡ್ ಗೆ ಬರೋಕೆ ಇನ್ಸ್ಪಿರೇಷನ್ ಯಾರು? ಅವರ ಬಗ್ಗೆ ಹೇಳಿ.

**ಉತ್ತರ:** ಆಕ್ಟಿಂಗ್ ಗೆ ಬರಬೇಕು ಅನ್ನೋದಕ್ಕೆ ಒಂದು ಸಿನಿಮಾ ಪೋಸ್ಟರ್ ಕಾರಣವಾಯಿತು. ನಾನು ಮಿಡ್ಲ್ ಸ್ಕೂಲ್ ಹೋದ ಮೊದಲನೇ ವರ್ಷ, ಸ್ಕೂಲ್ ಗೆ ನಡೆದು ಕೊಂಡು ಹೋಗೊ ರಸ್ತೆಯ, ಹೊಟೇಲ್ ಗೋಡೆಯ ಮೇಲೆ ಒಂದು ಪೋಸ್ಟರ್ ಅಂಟಿಸುತ್ತಾ ಇದ್ರು. ಏನದು ಅಂದೆ. ಸಿನಿಮಾ ಪೋಸ್ಟರ್ ಅಂದ. ದೊಡ್ಡ ಮುಖ ಕಾಣಿಸ್ತಾ ಇತ್ತು. ಅದು ಯಾವುದು ಅಂದೆ. ಆ ಪಿಕ್ಚರ್ ಹೀರೋದು ಅಂದ. ಒಂದು ನಿಮಿಷ ನೋಡ್ಬಿಟ್ಟು, ನಂದೂ ಹೇಗೆ ಫೋಟೋ ಬರುತ್ತೆ ಅಂದೆ. ಒಂದು ಪಟ್ ಅಂತ ಹೊಡೆದು ಸ್ಕೂಲ್ ಗೆ ಹೋಗು ಅಂದ. ಆದ್ರೆ ಆ ಪೋಸ್ಟರ್ ನಾನು ಹೀರೋ ಆಗಬೇಕು ಅಂತ ಆಸೆ ಹುಟ್ಟಿಸಿತು.

**ಪ್ರಶ್ನೆ**: ಈ ಜರ್ನಿಲಿ ನಿಮ್ಮ ಗುರು ಯಾರು? ಅವರ ಬಗ್ಗೆ ಹೇಳಿ.

**ಉತ್ತರ**: ನನ್ನ ಜರ್ನಿ ನಾಟಕದಿಂದ ಶುರುವಾಯಿತು. ಬಿ.ಎಸ್.ನಾರಾಯಣ ರಾವ್, ನಾಣಿ, ಪರ್ವತವಾಣಿ ನಾಟಕ ಬರೆದ ನರಸಿಂಹ ಇವರೆಲ್ಲಾ ನನಗೆ ಗುರುಗಳಾಗಿದ್ದರು. ಮೊದಲನೇ ಸಿನಿಮಾ ಹೀರೋ ಆಗಿ introduce ಮಾಡಿ, ಡೈರೆಕ್ಟ್ ಮಾಡಿದೋರು ಎಸ್. ಕೆ. ಚಾರಿ. ಅದಾದ ಮೇಲೆ ಶುಭ ಮಂಗಳ ಅಂತ, ಬರೀ ಆಕ್ಟರ್ ಆಗಿದ್ದೋನ ಸ್ಟಾರ್ ಮಾಡ್ತು. ಅದರ director ನನ್ನ ಗುರುಗಳು ಪುಟ್ಟಣ್ಣ ಜಿ. ಪುಟ್ಟಣ್ಣ ಕಣಗಾಲ್ ಅವರು. ಅವರೇ ನನ್ನ ಗುರುಗಳು.

**ಪ್ರಶ್ನೆ:** ನೀವು ಎಷ್ಟು ಸಿನಿಮಾದಲ್ಲಿ ಆಕ್ಟ್ ಮಾಡಿದೀರಾ? ಕನ್ನಡ ಅಲ್ಲದೆ ಬೇರೆ ಭಾಷೆಯಲ್ಲಿ ಆಕ್ಟ್ ಮಾಡಿದೀರಾ?

**ಉತ್ತರ:** ಅಯ್ಯೋ ನನ್ನಮ್ಮಾ ..ಹೀರೋ ಆಗಿ 200, supporting ರೋಲ್ 150.ಎಷ್ಟಾಯಿತು ಒಟ್ಟು, 350. ಮೂವಿ ತೆಲುಗು ಮಾಡಿದ್ದೆ. ಸೀರಿಯಲ್ ತಮಿಳ್ ಮಾಡಿದ್ದೆ

**ಪ್ರಶ್ನೆ** : ನಾನು ಬೆಸುಗೆ, ಶ್ರೀ ರಾಘವೇಂದ್ರ ವೈಭವ ಮತ್ತು ಶುಭ ಮಂಗಳ ಸಿನಿಮಾ ನೋಡಿದೀನಿ. ಇವೆಲ್ಲಾ ಸಿನಿಮಾದಲ್ಲಿ ನೀವು ಬೇರೆ ಬೇರೆ ರೋಲ್ ಮಾಡಿದೀರಾ. ನಿಮಗೆ ಇಷ್ಟವಾದ ಕ್ಯಾರೆಕ್ಟರ್ ಯಾವುದು?

**ಉತ್ತರ**: ಪುಟ್ಟ, ನನಗೆ ನಾನು ಮಾಡಿದ ಎಲ್ಲ ಕ್ಯಾರೆಕ್ಟರ್ ಗಳು ಇಷ್ಟ ಆಗಿದೆ. ಆದರೆ ನೀನು ಹೇಳಿದ 3 ಸಿನಿಮಾ, ನಿನಗೂ ಹಿಡಿಸಿತು, ಜನರಿಗೂ ಹಿಡಿಸಿದೆ. ಇನ್ನೊಂದು "ಮಾನಸ ಸರೋವರ" ಅಂತ, ಕನ್ನಡ ಸಿನೆಮಗಳಲ್ಲಿ ಒಂದು epic ಸಿನಿಮಾ ಅಂತ ತಗೊಂಡಿತ್ತು. 35 ವರ್ಷ ಆಯಿತು ಅದು ಬಂದು. ಅದು ಇನ್ನು ಜನರ ಮನಸ್ಸಿನಲ್ಲಿದೆ.ಅದು ನನಗೂ ಇಷ್ಟ ಆಯ್ತು.

**ಪ್ರಶ್ನೆ:** ನಿಮಗೆ ಇತ್ತೀಚೆಗೆ "**ಅಭಿನಯ ಮಾಣಿಕ್ಯ**" ಅನ್ನೋ ಬಿರುದು ಸಿಕ್ಕಿದೆ. ನಿಮಗೆ "**ಪ್ರಣಯ ರಾಜ**" ಅಂತ ಬಿರುದು ಹೇಗೆ ಸಿಕ್ಕಿತು?

**ಉತ್ತರ**: ಜನ ಸಿನಿಮಾ ನೋಡಿದ್ರು. ಒಳ್ಳೆ ಮಗನ ಪಾತ್ರ ಮಾಡಿದ್ದೆ. ಒಳ್ಳೆ ಗಂಡನ ಪಾತ್ರ ಮಾಡಿದ್ದೆ. ಒಳ್ಳೆ ಗಂಡ ಅಂದಾಗ ಎಲ್ಲ ತರದಲ್ಲೂ ಒಳ್ಳೆಯವನಾಗಿರಬೇಕು ಅಲ್ವಾ? ಹೆಂಡತಿನ ಮದುವೆ ಮುಂಚೆನೂ, ಮದುವೆ ಆದ ಮೇಲೂ, ತುಂಬಾ ಇಷ್ಟ ಪಟ್ಟು ಪ್ರೀತಿಸುತ್ತಾ ಇದ್ದೆ. ಆ ಪ್ರೀತಿ ಮಾಡೋ ರೀತಿ ಜನಕ್ಕೆ ಇಷ್ಟ ಆಯಿತು. ಅದಕ್ಕೆ "**ಪ್ರಣಯ ರಾಜ**" ಅಂತ ಬಿರುದು ಕೊಟ್ಟರು.



## ನಾನು ಮತ್ತು ಡಾ.ಶ್ರೀನಾಥ್ ಅವರ ಸಂದರ್ಶನದ ಒಂದು ತುಣುಕು:

**ಪ್ರಶ್ನೆ:** ಒಬ್ಬ ಆಕ್ಟರ್ ಗೆ ಯಾವ ಯಾವ ಸ್ಕಿಲ್ ಗಳು ಇರಬೇಕು ಅಂತ ಹೇಳುತೀರ? ಡಾನ್ಸ್, ಸಂಗೀತ, ಅಭಿನಯ ...
**ಉತ್ತರ**: ಆಕ್ಟರ್ ಅನ್ನಿಸ್ಕೋ ಬೇಕಾದ್ರೆ, ಯಾವುದಾದ್ರು ಒಂದು ಇದ್ರೂ ಆಗುತ್ತೆ. ಕಲಾವಿದ (ಆರ್ಟಿಸ್ಟ್ ) ಅನ್ನಿಸ್ಕೋ ಬೇಕಾದ್ರೆ ಎಲ್ಲಾನೂ ಬರಬೇಕಮ್ಮ . ಎಲ್ಲದರಲ್ಲೂ ಪರಿಣಿತಿ ಇರಬೇಕು.
**ಪ್ರಶ್ನೆ**: ನೀವು ಸಿನಿಮಾ ಮತ್ತು ಟಿವಿಯಲ್ಲಿ ಆಕ್ಟಿಂಗ್ ಮಾಡಿದೀರ. ಅವೆರಡರಲ್ಲಿ ನಿಮಗೆ ಡಿಫರೆನ್ಸ್ ಏನು ಅನ್ನಿಸುತ್ತೆ?
**ಉತ್ತರ:** ಸಿನಿಮಾ, ಒಂದು ಕಥೆ 2.15 ಘಂಟೆ ಯಲ್ಲಿ ಮುಗಿಬೇಕು. ಸೀರಿಯಲ್ ಒಂದು ಕಥೆ, ೧ ವರ್ಷನೂ ಬರಬಹುದು. 6-7 ಸಿನಿಮಾ ಆಗೋವಷ್ಟು. ಸಿನಿಮಾದಲ್ಲಿ ಆಕ್ಟ್ ಮಾಡಬೇಕು. ಟಿವಿಯಲ್ಲಿ ನ್ಯಾಚುರಲ್ ಆಗಿ ಇರಬೇಕು.
**ಪ್ರಶ್ನೆ**: ನೀವು ತುಂಬಾ ಫೇಮಸ್ ಆಗಿದೀರ, ನಿಮಗೆ ಏನು ಅನ್ನಿಸುತ್ತೆ?
**ಉತ್ತರ**: ಸತ್ಯವಾಗಿ ಹೇಳಬೇಕು ಅಂದ್ರೆ, ಇನ್ನೂ ಜನರ ಕೈಲಿ ಸೈ ಅನ್ನಿಸಿಕೊ ಬೇಕಾಗಿತ್ತು ಅನ್ನಿಸುತ್ತೆ. ಒಬ್ಬ ಕಲಾವಿದನಾಗಿ ಇನ್ನೂ achieve ಮಾಡಬೇಕು ಅಂತ ಆಸೆ.
**ಪ್ರಶ್ನೆ:** ನೀವು ಒಬ್ಬ ಆಕ್ಟರ್, ಗಂಡ, ಅಪ್ಪ, ಅಜ್ಜ. ಆಕ್ಟಿಂಗ್ ಮತ್ತು ಫ್ಯಾಮಿಲಿ ಹೇಗೆ ಮ್ಯಾನೇಜ್ ಮಾಡುತೀರ? ನಿಮ್ಮ ಮಕ್ಕಳ ಜೊತೆ ಟೈಮ್ ಸ್ಪೆಂಡ್ ಮಾಡ್ತಿದ್ರಾ?
**ಉತ್ತರ:** ಅದಕ್ಕೆ ನನಗೆ ಈ ಲೈಫ್ ನಲ್ಲಿ ಒಬ್ಬರು Director ಅಂತ ಇದಾರೆ. ಅವರು ಆ ಟೈಮ್ ನ ಕೆಲಸಕ್ಕೆ, ಮನೆಗೆ, ಮಕ್ಕಳಿಗೆ ಅಂತ ಸ್ಪ್ಲಿಟ್ ಮಾಡುತ ಹೋಗುತಾರೆ. ಆ Director ಯಾರು ಗೊತ್ತಾ ? ನನ್ನ ಹಿಂದೆ ಕೂತಿದಾರಲ್ಲ, ಅವರು. ನನ್ನ ಹೆಂಡತಿ ಗೀತಾ.
**ಪ್ರಶ್ನೆ**: ಆಕ್ಟಿಂಗ್ ಬಗ್ಗೆ ಮಕ್ಕಳಿಗೆ ಏನು ಹೇಳೋಕೆ ಇಷ್ಟ ಪಡುತೀರಾ?
**ಉತ್ತರ:** ಅಮ್ಮಾ, ನಿಮಗೆ ಇಂಟರೆಸ್ಟ್ ಇದ್ರೆ ಆಕ್ಟ್ ಮಾಡಿ. ನೀವು ಏನಾದ್ರು ಪರ್ಫಾರ್ಮೆನ್ಸ್ ಮಾಡಿದಾಗ, ನಿಮಗೊಂದು satisfaction ಸಿಗುತ್ತಲ್ಲಾ, ಅದೇ ಮುಂದೆ ನಾವು ಏನಾದ್ರು ಸಾಧಿಸೋಕೆ ಇನ್ಸ್ಪಿರೇಷನ್ ಆಗುತ್ತೆ. ಅದಕ್ಕೆ ನೀವು ಆಕ್ಟ್ ಮಾಡಬೇಕು. ನಾಚಿಕೊಬಾರದು. ಎಲ್ಲರ ಹತ್ರ ಸೈ ಅನ್ನಿಸ್ಕೋಬೇಕು. ಆದರೆ ಇದಕ್ಕೆ ಆಸೆ ಪಟ್ಟು ಓದನ್ನು ಬಿಡಕಾಗಲ್ಲ. ಓದೋದಕ್ಕೆ ಜಾಸ್ತಿ ಟೈಮ್ ಕೊಡಬೇಕು. ಪಾಠದ ಜೊತೆ ಇತರ ಚಟುವಟಿಕೆಗಳು ಇರಬೇಕು.
**ಪ್ರಶ್ನೆ**: ನಮ್ಮ ಕನ್ನಡ ಕ್ಲಾಸ್ ಮಕ್ಕಳಿಗೆ ಕನ್ನಡ ಯಾಕೆ ಕಲಿಬೇಕು ಅಂತ ಹೇಳಿ.
**ಉತ್ತರ**: ಕನ್ನಡ ಯಾಕೆ ಕಲಿಬೇಕು ಅಂತ ಗೊತ್ತಿಲ್ವಾ ನಿಮಗೆ? ನಮ್ಮ ಭಾಷೆ ಅನ್ನೋದು ಇದೆಯಲ್ಲಾ ಕನ್ನಡ, ಅದನ್ನ ಮರೀಬಾರದು. ಊಟ ಮಾಡೋದು ಮರಿತೀವಾ? ಆಟ ಆಡೋದು ಮರಿತೀವಾ? ಯಾವುದು ಮರೆಯೋಲ್ಲ ಅಲ್ವಾ?
ಮರಿಬಾರದು, ಯಾಕೆಂದ್ರೆ ಕನ್ನಡ ಭಾಷೆ ಅಮ್ಮನ ಹಾಗೆ . ಈಗ ಅಮ್ಮನ ಮರಿಯೋಕೆ ಆಗುತ್ತಾ? ಆಗೋಲ್ಲ ಅಲ್ವಾ? ಅಮ್ಮ ಎಷ್ಟು ಮುಖ್ಯವೋ ಹಾಗೆ ಕನ್ನಡ ಭಾಷೆ ಕೂಡ. ಮಾತಾಡಿ ಕಂದ, ಕನ್ನಡ ಮಾತಾಡಿ. ಭಾಷೆಯ ಬಗ್ಗೆ ಒಲವು ಬೆಳೆಸಿಕೊಳ್ಳಿ.

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



## ನನ್ನ ಇಂಡಿಯಾ ಟ್ರಿಪ್ : ಇಂಚರ ಗೋಪಿನಾಥ್

ನಾನು ಐದು ವಾರಗಳಿಗೆ ಇಂಡಿಯಾ ಗೆ ಹೋಗಿದ್ದೆ. ನಾವು 19 ಜೂನ್ ಗೆ ಹೋಗಿ ಜುಲೈ 23 ವಾಪಸು ಬಂದ್ವಿ . ಇಂಡಿಯಾ ತುಂಬಾ ಫನ್ ಇತ್ತು . ತುಂಬಾ ಮಜಾ ಬಂತು. ನಾನು ಇಂಡಿಯಾ ಮತ್ತು ಅಮೇರಿಕಾ ನಡುವೆ ತುಂಬಾ ಡಿಫರೆಂಟ್ ಅನ್ನು ನೋಟೀಸ್ ಮಾಡಿದೆ.

ನಾವು ಇಂಡಿಯಾ ಹೋಗಿದ್ದು ನನ್ನ ಕಸಿನ್ ಮದುವೆಗೆ. ಇದುವರೆಗೆ ನಾನು ನೋಡಿದ ಎರಡನೇ ಮದುವೆ ಇದು. ಈ ಸಲ ನಾನು ನನ್ನ ಅಕ್ಕನ ಬೆಸ್ಟ್ ಫ್ರೆಂಡ್ಸ್ ಮೀಟ್ ಮಾಡಿದೆ. ಅಂಶು ಮತ್ತು ಪೂರ್ವಿ ಅವರ ಹೆಸರು. ಅಕ್ಕ ಅವರನ್ನು ನೋಡಿ ತುಂಬಾ ಖುಷಿಪಟ್ಟಳು. ನಾನು ನನ್ನ ಕಸಿನ್ಸ್ ಜೊತೆಯಲ್ಲಿ ( ನವ್ಯ, ಇಶು, ನಿಖಿಲ್ ಮತ್ತು ಮೇರಿ ) ಒಂದು ಫನ್ನಿ ಮೂವಿ "Antman" ನೋಡಲು ಹೋಗಿದ್ದೆ. ಮೂವಿ ತುಂಬಾ ಫನ್ನಿ ಆಗಿತ್ತು.

ನಾವು ಚಿತ್ರದುರ್ಗ, ಮದುರೈ ಮತ್ತು ರಾಮೆಶ್ವರಗಳಿಗೆ ರೋಡ್ ಟ್ರಿಪ್ ಮಾಡಿದ್ವಿ. ಈ ಜಾಗಗಳ ಬಗ್ಗೆ ನಾನು ನೆಕ್ಸ್ಟ್ ಸಂಚಿಕೆಯಲ್ಲಿ ವಿವರವಾಗಿ ಹೇಳ್ತೀನಿ. ಈ ಜಾಗಗಳಿಗೆ ಹೋದಾಗ ಅಮೇಜಿಂಗ್ ಹೋಟೆಲ್ ಮತ್ತು ಫುಡ್ ತಿಂದ್ವಿ.
ತುಂಬಾ ಚೆನ್ನಾಗಿತ್ತು. ನಾವು "ದೇವಿಪಟ್ಟಣಂ" ಅಂತ ಒಂದು ದೇವಸ್ಥಾನಕ್ಕೆ ಹೋಗಿದ್ವಿ. ಆ ದೇವಸ್ಥಾನ ನೀರಲ್ಲಿ ಇದೆ. ನಾವು ನೀರಲ್ಲಿ ಇರುವ ನವಗ್ರಹಗಳಿಗೆ ಪೂಜೆ ಮಾಡಿ ಬಂದೆವು. ನಾವು ನಮ್ಮ ಅಜ್ಜಿ ತಾತನ ಊರಲ್ಲಿ ಇರುವ ತೋಟಕ್ಕೆ ಕೂಡ ಹೋಗಿದ್ವಿ.



















# ಚಿಣ್ಣರ ಚಿತ್ರ ಕಲೆ


ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ
ನಿರ್ವಿಘ್ನಂ ಕುರುಮೇದೇವ ಸರ್ವ ಕಾರ್ಯೇಷು ಸರ್ವದಾ||



ಅಭಿಜ್ಞಾ



ಪ್ರಕೃತಿ




ಪ್ರೇರಣ ಗೌಡ




ಶ್ರಾವ್ಯ




ಕೃಷ್ಣಮೂರ್ತಿ



ಮಹಿತ್

ವಸುದೇವಸುತಂ ದೇವಂ ಕಂಸ ಚಾಣೂರ ಮರ್ದನಂ |
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ||



ಪ್ರಧ್ಯುಮ್ನ




ಅಮಿತ್



ಪ್ರಮಿತಿ ಉಪಾಧ್ಯ

## ಜೋಕ್ಸ್ : ನಮಿತ ಪಂಡಿತ್



**ತಾಯಿ (ಹೆದರುತ್ತಾ):** ಮಗ, ಮನೆಗೆ ಬೇಗನೆ ಬಾ ... ನಿನ್ನ ಹೆಂಡತಿಗೆ ಲಕ್ವಾ ಹೊಡೆದಂಗೆ ಕಾಣುತ್ತಿದೆ.... ಕಣ್ಣುಗಳು ಮೇಲ್ಮುಖವಾಗಿ ನೋಡುತ್ತಿದೆ....ಮುಖ ತಿರುಚಿದ ಹಾಗೆ ಕಾಣುತ್ತಿದೆ....ನಾಲಿಗೆ ಹೊರಬಂದಿದೆ .... ಕುತ್ತಿಗೆ ಮುರಿದಂತೆ ತೋರುತ್ತಿದೆ **...!**
**ಮಗ:** ಅಮ್ಮ , ನೀನು ಚಿಂತಿಸಬೇಡ ... ಅವಳು selfie ತೆಗೆದುಕೊಳ್ಳುತ್ತಿದ್ದಾಳೆ...😂😂😂

## ಅಕ್ಟೋಬರ್ ಜನ್ಮದಿನಗಳು

- ಕೆ. ಶಿವರಾಮ್ ಕಾರಂತ – 10 ಅಕ್ಟೋಬರ್ 1902
- ಅನಿಲ್ ಕುಂಬ್ಳೆ- 17 ಅಕ್ಟೋಬರ್ -1970
- ಎಸ್. ಎಸ್. ರಾಜಮೌಳಿ- 10 ಅಕ್ಟೋಬರ್ 1973
- ಚಿರಂಜೀವಿ ಸರ್ಜಾ - 17 ಅಕ್ಟೋಬರ್ 1984
- ಅಶ್ವಿನಿ ನಾಚಪ್ಪ - 21 ಅಕ್ಟೋಬರ್ 1967
- ಅಶೋಕ್ ಖೇಣಿ - 05 ಅಕ್ಟೋಬರ್ 1950
- ಸಂಗೀತ ಕಟ್ಟಿ - 07 ಅಕ್ಟೋಬರ್ 1970
- ಆರ್.ಕೆ . ಲಕ್ಷ್ಮಣ್ - 24 ಅಕ್ಟೋಬರ್ 1921
- ರಾಜೇಂದ್ರ ಸಿಂಗ್ ನಾಯ್ಡು - 22 ಅಕ್ಟೋಬರ್ 1952
- ಹರಿಪ್ರಿಯ - 29 – ಅಕ್ಟೋಬರ್ 1991

## ನಾ ಕಂಡ ಸಿನಿಮಾ "ಸಂತು ಸ್ಟ್ರೈಟ್ ಫಾರ್ವರ್ಡ್" : ಮೇಘನ ಪಂಡಿತ್




ನಾನು ನೊಡಿದ ಸಿನೆಮಾ "ಸಂತು ಸ್ಟ್ರೈಟ್ ಫಾರ್ವರ್ಡ್". ಇದು ಯಶ್ ಮತ್ತು ರಾಧಿಕಾ ಪಂಡಿತ್ ಸಿನೆಮಾ ಆಗಿದೆ. ಈ ಸಿನೆಮಾಲ್ಲಿ ಯಶ್ ಹೆಸರು ಸಂತು ಮತ್ತು ರಾಧಿಕಾ ಪಂಡಿತ್ ಹೆಸರು ಅನನ್ಯಾ .ಇದು ಒಂದು ಆಕ್ಷನ್ ಲವ್ ಸ್ಟೋರಿ ಆಗಿದೆ. ಈ ಸಿನೆಮಾದಲ್ಲಿ ಸಂತು ಅನನ್ಯಾನ ಪ್ರೀತಿಸುತ್ತಾನೆ. ಸಂತು ಮೊದಲ ಸಲ ಅನನ್ಯಾನ್ನು ಟ್ರಾಫಿಕ್ ಸಿಗ್ನಲ್ ಬಳಿ ಕಂಡನು. ಅನನ್ಯಾ ಮತ್ತು ಅವಳ ಸಹಪಾಠಿಗಳು ಕೆಲವು ದಾನಕ್ಕಾಗಿ ಹಣವನ್ನು ಸಂಗ್ರಹಿಸುತ್ತಿದ್ದರು.ಆದರೆ ಯಾರೂ ಏನನ್ನೂ ಕೊಡಲಿಲ್ಲ. ನಂತರ ಅನನ್ಯಾ ಆಕೆಯ ಆಭರಣಗಳು ಮತ್ತು ಹಣವನ್ನು ಬಾಲಕಿಯರಿಗೆ ನೀಡಲಾರಂಭಿಸಿದಳು. ಆಕೆಯನ್ನು ನೋಡಿ ಎಲ್ಲರೂ ಹಣವನ್ನು ನೀಡಲು ಪ್ರಾರಂಭಿಸಿದರು.ಆ ದಿನದಿಂದ ಸಂತು ಅನನ್ಯಾಳನ್ನು ಇಷ್ಟಪಡುತ್ತಾನೆ.ಒಂದು ಅಪಘಾತದಲ್ಲಿ ಅನನ್ಯಾ ತಾಯಿ ಮತ್ತು ತಂದೆಯನ್ನು ಕಳೆದುಕೊಂಡಳು. ಅನನ್ಯಾ ತಾಯಿ ಮತ್ತು ತಂದೆ ದೇವನನ್ನು ಮದುವೆಯಾಗಲು ಅನನ್ಯಾಳನ್ನು ಕೇಳುತ್ತಿದ್ದರು. ಅನನ್ಯಾಳ ಅಂಕಲ್ ದೇವ. ಅವಳ ತಾಯಿ ಮತ್ತು ತಂದೆ ಮರಣಹೊಂದಿದಾಗ ಆಕೆ ತನ್ನ ತಾತಂಗೆ ಹೇಳುತ್ತಾಳೆ, ಆಕೆಯ ತಾಯಿ ಮತ್ತು ತಂದೆಯ ಕೊನೆಯ ಆಶಯವನ್ನು ಪೂರೈಸಲು ದೇವನನ್ನು ಮದುವೆಯಾಗುತ್ತೇನೆ ಅಂತ. ಅನನ್ಯ ಸಂತು ಪ್ರೀತಿಸುತ್ತಾಳ ಮತ್ತು ಸಂತುವನ್ನು ಮದುವೆಯಾಗುತ್ತಾಳ ಅಥವಾ ಅವಳು ತಾಯಿ ಮತ್ತು ತಂದೆಯ ಕೊನೆಯ ಆಶಯವನ್ನು ಪೂರೈಸಲು ದೇವನನ್ನು ಮದುವೆಯಾಗುತ್ತಾಳ? ನಾನು ಸಂಪೂರ್ಣ ಕಥೆಯನ್ನು ,ಸಿನಿಮಾ ಅಂತ್ಯವನ್ನು ಹೇಳುದಿಲ್ಲ .ಇದನ್ನು ತಿಳಿದುಕೊಳ್ಳಲು ನೀವು ಪೂರ್ಣ ಚಲನಚಿತ್ರವನ್ನು ನೋಡಬೇಕು ಮತ್ತು ಸಿನಿಮಾವನ್ನು ಆನಂದಿಸಿಬೇಕು.

ಈ ಚಿತ್ರದಲ್ಲಿ ಸಾಕಷ್ಟು ಹಾಡುಗಳಿವೆ. ನನ್ನ ನೆಚ್ಚಿನ ಹಾಡಿನ ಒಂದು Self Made ಶೆಜಾಧ. ಈ ಹಾಡು ಪಿ. ರವಿ ಶಂಕರ್, ರಂಜಿತ್, ಸಂತೋಷ್ ವೆಂಕಿ, ಶಶಾಂಕ್ ಹಾಡಿದ್ದಾರೆ.

ನನ್ನ ಎರಡನೆಯ ನೆಚ್ಚಿನ ಹಾಡು ತಂಗಾಳಿ. ಈ ಹಾಡನ್ನು ಸೋನು ನಿಗಮ್ ಮತ್ತು ಟಿಪ್ಪು ಹಾಡಿದ್ದಾರೆ

**ನುಡಿಮುತ್ತು :**

೧ ನಾವು ಸದ್ಯ ಏನಾಗಿರುವೆವೋ ಅದು ನಮ್ಮ ಯೋಚನೆಯ ಫಲ. ಯೋಚನೆಗಳೇ ಈಗಿನ ನಮ್ಮ ಸ್ಥಿತಿಗೆ ತಳಹದಿ. ನಡೆನುಡಿಯಲ್ಲಿ ನಮ್ಮ ಯೋಚನೆ ಒಳ್ಳೆಯದಾಗಿದ್ದರೆ ನೆರಳಿನಂತೆ ಸುಖವು ಹಿಂಬಾಲಿಸುತ್ತದೆ; ನಮ್ಮ ಯೋಚನೆ ಕೆಟ್ಟದ್ದಾದರೆ ದುಃಖವು ಬೆಂಬತ್ತಿ ಬರುತ್ತದೆ - ಗೌತಮ ಬುದ್ಧ

೨. ಯಾವುದೇ ಗುರುವು ತನ್ನ ಶಿಷ್ಯನಿಗೆ ಒಂದೇ ಒಂದು ಅಕ್ಷರದ ಜ್ಞಾನವನ್ನು ಕೊಟ್ಟರೂ ಅಂತ ಗುರುವಿನ ಋಣದಿಂದ ಮುಕ್ತನಾಗಲು ಇನ್ನಾವುದೇ ಮಾರ್ಗವಾಗಲಿ, ವಸ್ತುವಾಗಲಿ ಈ ಭೂಮಿಯಲ್ಲಿ ಸಿಗಲಾರದು. ಜ್ಞಾನ ಮತ್ತು ಗುರು ಎರಡೂ ಕೂಡ ಅನುಪಮವಾದದ್ದು ಮತ್ತು ಅಮೂಲ್ಯವಾದದ್ದು.

**ಸುಭಾಷಿತ :** ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ಹೊರತು ಇನ್ನಾವುದು ಸರಿಯಾಗದು.
– ಡಿ. ವಿ. ಗುಂಡಪ್ಪ

.

## ಮಂಕುತಿಮ್ಮನ ಕಗ್ಗ

ಏನು ಭೈರವಲೀಲೆಯೀ ವಿಶ್ವಭ್ರಮಣೆ!
ಏನು ಭೂತಗ್ರಾಮನರ್ತನೋನ್ಮಾದ ! |
ಏನಗ್ನಿ ಗೋಳಗಳು ! ಏನಂತರಾಳಗಳು !
ಏನು ವಿಸ್ಮಯ ಸೃಷ್ಟಿ! – ಮಂಕುತಿಮ್ಮ ||೯||

ಏನು ಪ್ರಪಂಚವಿದು! ಏನು ಧಾಳಾಧಾಳಿ|
ಏನದ್ಭುತಾಪಾರಶಕ್ತಿ ನಿರ್ಘಾತ! ||
ಮಾನವನ ಗುರಿಯೇನು? ಬೆಲೆಯೇನು?ಮುಗಿವೇನು? |
ಏನರ್ಥವಿದಕೆಲ್ಲ? – ಮಂಕುತಿಮ್ಮ ||೧೦||

## ಪದ ಹುಡುಕೋಣ – ಪ್ರಧಾನ ಮಂತ್ರಿಗಳು

| | | | | | | | | | | | |
|---|---|---|---|---|---|---|---|---|---|---|---|
| ಗು | ಣ | ರಾ | ಜ | ಅಂ | ಕೀ | ಧಾ | ನಿ | ರಾ | ಯ | ಚ | ತು |
| ತ | ಚ | ಕೀ | ಜ | ವು | ದೇ | ನ | ರ | ಸಿಂ | ಹ | ರಾ | ವ್ |
| ಮು | ರ | ಣ | ಇಂ | ಚೀ | ವೇ | ಬು | ಕ | ವಿ | ತೆ | ಯೂ | ಗ |
| ಯಾ | ಣ್ | ಧಿ | ದಿ | ಢ | ಗೌ | ಶೀ | ವಿ | ಯಿಂ | ದ | ಟ | ದಾ |
| ಝು | ಸಿಂ | ಖು | ರಾ | ಎ | ಡ | ನ | ರೇಂ | ದ್ರ | ಮೋ | ದಿ | ಲೆ |
| ಐ | ಗ್ | ಏ | ಗಾಂ | ಅಂ | ಗಾ | ರ | ಕ | ವಿ | ಪಿ | ಸಿಂ | ಗ್ |
| ಮಿ | ಲಾ | ಅ | ಧಿ | ಕ | ಮು | ರಾ | ರ್ಜಿ | ಶ | ರ | ಣಾ | ದ |
| ಕೀ | ಲ್ | ಪ್ರ | ಭಾ | ವ | ಳಿ | ಭ | ಕ್ತ | ಮು | ದೇ | ವ | ರು |
| ಲಾ | ಬ | ಚಂ | ದ್ರ | ಶೇ | ಖ | ರ್ | ನೆ | ಎ | ಗು | ಜ್ರಾ | ಲ್ |
| ಖ | ಹಾ | ಕಾಂ | ಚಾ | ಣ | ಗು | ಟ್ಟು | ಹ | ಠ | ವಾ | ಬಾ | ಗಿ |
| ಕ | ದ್ದೂ | ಪು | ಸ್ತ | ಕೋ | ದ್ಯ | ಮ | ರೂ | ಗ | ಜ | ದೂ | ರ |
| ವಾ | ರ್ | ಣಿ | ರಾ | ಜೀ | ವ್ | ಗಾಂ | ಧಿ | ಸಂ | ಪೇ | ಚಾ | ರ |
| ಖ | ಶಾ | ಮೊ | ಬೈ | ಲ್ | ಲೆ | ಕ್ಕಿ | ಗ | ರು | ಯಿ | ಕೋ | ಲು |
| ಮಿ | ಸ್ತ್ರಿ | ಗ್ಯಾ | ಮ | ನ | ಮೋ | ಹ | ನ್ | ಸಿಂ | ಗ್ | ಗಂ | ಗ |

ಇಂದಿರಾಗಾಂಧಿ
ಮುರಾರ್ಜಿ
ನೆಹರೂ
ಲಾಲ್‌ಬಹಾದ್ದೂರ್‌ಶಾಸ್ತ್ರಿ
ಚಂದ್ರಶೇಖರ್
ರಾಜೀವ್‌ಗಾಂಧಿ
ವಾಜಪೇಯಿ
ಗುಜ್ರಾಲ್
ಮನಮೋಹನ್‌ಸಿಂಗ್
ನರೇಂದ್ರಮೋದಿ
ದೇವೇಗೌಡ
ನರಸಿಂಹರಾವ್
ಚರಣ್‌ಸಿಂಗ್
ವಿಪಿಸಿಂಗ್

## ಚಿತ್ರ ಶೀರ್ಷಿಕೆ : ಮಹೇಶ್ ನೀಲಕಂಠ



ನೀಲಾಂಜನ ಸಮಾಭಾಸಂ ರವಿಪುತ್ರಂ ಯಮಾಗ್ರಜಂ । ಛಾಯಾ ಮಾರ್ತಾಂಡ ಸಂಭೂತಂ ತಂ ನಮಾಮಿ ಶನೈಶ್ಚರಂ॥





## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

**ಪತ್ರ ೩**

**ಪ್ರೀತಿಯ ಪುಟಾಣಿಗಳೆ,**

ಕಾಳಿದಾಸನಷ್ಟೆ ಕಲಾತೀತನಾದ , ವಿಶ್ವ ವಿಖ್ಯಾತ ಪ್ರತಿಭೆ ೧೬ ನೆ ಶತಮಾನದ ಇಂಗ್ಲೆಂಡ್ ನ ಕವಿ ಮತ್ತು ಮಹಾನ್ ನಾಟಕಕಾರ ಷೇಕ್ಸ್ ಪಿಯರ್. ಈಸ್ಟ್ ಇಂಡಿಯಾ ಕಂಪನಿಯ ರಾಬರ್ಟ್ ಕ್ಲೈವ್ ಬ್ರಿಟಿಷ್ ರ ವಾಸಹಿತುಶಾಹಿ ದಬ್ಬಾಳಿಕೆ ಚರಿತ್ರೆಯ ಸಂಕೇತವಾದರೆ, ಅವನಿಗಿಂತ ತುಸು ಹಿಂದಿನವನಾದ ಷೇಕ್ಸ್ ಪಿಯರ್ ವಿಶ್ವವಿಖ್ಯಾತ ಇಂಗ್ಲಿಷ್ ಭಾಷೆ ಸಂಸ್ಕೃತಿ ಕಲೆ ಮತ್ತು ಅದ್ಭುತ ಕಾವ್ಯಭಿವ್ಯಕ್ತಿಯ ಪ್ರತೀಕ. ಏವನ್ ನದಿ ತೀರದ ಷೇಕ್ಸ್ ಪಿಯರ್ ಹುಟ್ಟೂರು ಸ್ಟ್ರ್ಯಾಟ್ ಫರ್ಡ ನಲ್ಲಿ ಪ್ರತಿವರ್ಷ ನಡೆವ ನಾಟಕೋತ್ಸವಕ್ಕೆ ವಿಶ್ವಾದ್ಯಂತದ ಅಭಿಮಾನಿಗಳು ಯಾತ್ರೆ ಬರುತ್ತಾರೆ. ಷೇಕ್ಸ್ ಪಿಯರ್ ೩೭ ನಾಟಕಗಳನ್ನಲ್ಲದೆ, ೧೫೪ ಸುವಿಖ್ಯಾತ ಸಾನೆಟ್\ಸುನೀತ(೧೪ ಸಾಲಿನ ಕವನ) ಗಳನ್ನು ರಚಿಸಿದ್ದಾನೆ. ಅವನ ನಾಟಕಗಳನ್ನು ಟ್ರ್ಯಾಜಿಡಿ(ದುರಂತ) , ಕಾಮಿಡಿ(ಸುಖಾಂತ), ರೊಮ್ಯಾನ್ಸ್(ಕಲ್ಪನಾದ್ಭುತ) ಮತ್ತು ಹಿಸ್ಟರಿ(ಐತಿಹಾಸಿಕ) ನಾಟಕಗಳೆಂದು ವಿಭಾಗಿಸುವ ಪರಿಪಾಠವಿದೆ. ಮ್ಯಾಕ್ಬೆತ್, ಹ್ಯಾಮ್ಲೆಟ್, ಒಥೆಲೊ ಮತ್ತು ಕಿಂಗ್ ಲಿಯರ್ ಷೇಕ್ಸ್ ಪಿಯರ್ ನ ಫೋರ್ ಗ್ರೇಟ್ ಟ್ರ್ಯಾಜಿಡಿಗಳು ಎಂದು ಪ್ರಸಿದ್ಧವಾಗಿದೆ.

ಕಿಂಗ್ ಲಿಯರ್ ಕತೆ ಗೊತ್ತಾ? ಅವ ರಾಜ್ಯಭಾರ ಮಾಡಲಾರದಷ್ಟು ಮುದಿ ಮುದಿ ಮುದುಕನಾಗಿದ್ದ. ಆದರೆ ಅವನಿಗೆ ಗಂಡುಮಕ್ಕಳು ಇರಲಿಲ್ಲ . ಒಂದು ದಿನ ತನ್ನ ಮೂವರು ಹೆಣ್ಣು ಮಕ್ಕಳನ್ನು ಆಸ್ಥಾನಕ್ಕೆ ಕರೆಸಿ ವಿಚಿತ್ರ ಪ್ರಶ್ನೆ ಹಾಕಿದ. ನಿಮ್ಮಲ್ಲಿ ಒಬ್ಬೊಬ್ಬರೂ ನನ್ನನ್ನ ಎಷ್ಟು ಪ್ರೀತಿಸುತ್ತೀರಿ ಹೇಳಿ? ನಿಮ್ಮ ಪ್ರೀತಿಗೆ ಅನುಗುಣವಾಗಿ ನನ್ನ ರಾಜ್ಯ ಹಂಚಿಕೊಡುವೆ ಅಂದ. ಪ್ರೀತಿ ಅಳತೆಗೆ ತೂಕಕ್ಕೆ ಸಿಗುವ ವಸ್ತುವೆ? ಅಪ್ಪನ ದಡ್ಡತನದ ದುರುಪಯೋಗ ಪಡೆದ ಹಿರಿಮಗಳು ಗಾನೆರಿಲ್ ಅವನನ್ನ ಮಾತಿನಲ್ಲೇ ಮರಳುಮಾಡಿ ರಾಜ್ಯದ ಮೂರನೇವೊಂದು ಪಾಲು ಗಿಟ್ಟಿಸಿದಳು. ಎರಡನೇ ಮಗಳು ರೀಗನ್ ಅಕ್ಕನಿಗಿಂತ ಮುಂದೆ ಹೋಗಿ , ತನ್ನ ಪ್ರೀತಿ ಬಣ್ಣಿಸಲು ಶಬ್ದಗಳೆ ಸಿಗುತ್ತಿಲ್ಲಾಂತ ಹೇಳಿ ರಾಜ್ಯದ ಮತ್ತೊಂದು ಭಾಗ ಕೊಟ್ಟುಕೊಂಡಳು. ಇನ್ನೂ ಮದುವೆಯಾಗದ ಕಾರ್ಡೀಲಿಯಾ ಅಪ್ಪನ್ನ ಮಗಳು ಎಷ್ಟು ಪ್ರೀತಿಸಬಹುದೊ ಅಷ್ಟು ಮಾತ್ರ ಪ್ರೀತಿಸ್ತೀನಿ, ಅದಕ್ಕಿಂತ ಹೆಚ್ಚೂ ಇಲ್ಲ ಕಮ್ಮೀನೂಯಿಲ್ಲ ಅಂದಳು. ಅಷ್ಟೇ ಅಲ್ಲದೆ ಅಪ್ಪನ ಪ್ರೀತಿಯ ಈ ಮೂರನೇ ಮಗಳು ಅಕ್ಕಂದಿರ ಮಾತಿನ ಮೋಸವನ್ನು ಬಯಲಿಗೆಳೆದಳು. ಅವಳ ಮಾತನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕಿಂಗ್ ಲಿಯರ್ ಸಿಟ್ಟಿಗೆದ್ದ . ಇನ್ನೊಂದು ಅವಕಾಶ ಕೊಡ್ತೀನಿ, ನಿನ್ನ ಮಾತು ತಿದ್ದಿಕೊಂಡು ಸರಿಯಾಗಿ ಉತ್ತರ ಹೇಳು. ಇಲ್ಲಾಂದ್ರೆ ರಾಜ್ಯ ಗಿಜ್ಯ ಏನೂ ಕೊಡಲ್ಲ ಎಂದು ಗುಡುಕು ಹಾಕಿದ. ತನ್ನಲ್ಲಿ ತನಗೆ ಸಂಪೂರ್ಣ ನಂಬಿಕೆಯಿದ್ದ ಕಾರ್ಡೀಲಿಯಾ ತನ್ನ ಮಾತಿಗೇ ಅಂಟಿಕೊಂಡಳು. ಅದಕ್ಕಾಗಿ ಕಿಂಗ್ ಲಿಯರ್ ಅವಳನ್ನು ರಾಜ್ಯದಿಂದ ಗಡಿಪಾರು(ಬ್ಯಾನಿಷ್) ಮಾಡಿಬಿಟ್ಟ. ಅವಳ ಪರವಹಿಸಿದ ನೆಚ್ಚಿನ ಸೇವಕ ಕೆಂಟ್ ನನ್ನೂ ಗಡಿಪಾರು ಮಾಡಿದ. ಆದರೆ ಆಸ್ಥಾನ ಸಭೆಯಲ್ಲಿ ಕೂತಿದ್ದ ಫ್ರಾನ್ಸ್ ದೇಶದ ರಾಜ ಕಾರ್ಡೀಲಿಯಾಳ ನಡೆ ನುಡಿ ಮೆಚ್ಚಿ ಅವಳ ಕೈ ಹಿಡಿದು ಕರೆದುಕೊಂಡು ಹೋದ. ಮುಂದೆದೆ ಶುರುವಾಯಿತು ಮುದುಕನ ಹಬ್ಬ.



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

ತಂದೆ ಇಷ್ಟಪಟ್ಟಷ್ಟು ದಿನ ಅವನನ್ನು ತಮ್ಮರಮನೆಯಲ್ಲಿ ಇಟ್ಟುಕೊಂಡು ಸಾಕಲಾರೆವೆಂದು ಚೌಕಾಶಿ ಮಾಡ ತೊಡಗಿದರು. ಗಾನೆರಿಲ್ ಮತ್ತು ರೀಗನ್. ಇಬ್ಬರೂ ತಮ್ಮಪ್ಪ ತಮ್ಮ ಜೊತೆಯಲ್ಲಿರಲು ಬಿಡಲಿಲ್ಲ. ಕುಂಟು ನೆಪವೊಡ್ಡಿ ಅವನನ್ನು ದೂರವಿಟ್ಟರು. ಅವನ ಅಂಗರಕ್ಷಕನನ್ನು ಅವಮಾನಿಸಿ ಕಳಿಸಿದರು. ಅವನ ನೆಚ್ಚಿನ ಸೈನಿಕರನ್ನು ತಮ್ಮ ಅರಮನೆಗಳಿಂದ ಅಟ್ಟಿದರು. ತಲೆಕೆಟ್ಟು ಹುಚ್ಚನಾದ ಕಿಂಗ್ ಲಿಯರ್ ಗುಡುಗು ಮಿಂಚಿನ ಮಳೆ ಸುರಿವ ಹಾಳು ದಿಬ್ಬ ಹತ್ತಿ ಆಕಾಶಕ್ಕೆ ಹುಯ್ಲಿಟ್ಟ. ಹಿರಿ ಹೆಣ್ಣು ಮಕ್ಕಳನ್ನು ಶಪಿಸಿದ. ಕಿರಿಯವಳಾದ ಕಾರ್ಡೀಲಿಯಾ ಳನ್ನು ನೆನೆದು ಕಣ್ಣೀರಿಟ್ಟು ಪಶ್ಚಾತ್ತಾಪಪಟ್ಟ. ಕಡೆಗೆ ಎದೆ ನೋವು ತಾಳಲಾರದೆ ಎಚ್ಚರತಪ್ಪಿ ಕುಸಿದು ಬಿದ್ದ. ಮಾರುವೇಶದಲ್ಲಿ ಕಿಂಗ್ ಲಿಯರ್ ನನ್ನೇ ನೆರಳಿನಂತೆ ಹಿಂಬಲಿಸುತ್ತಿದ್ದ ಕೆಂಟ್ ಅವನನ್ನು ಆಸ್ಪತ್ರೆಗೆ ಸೇರಿಸಿ ಕಾರ್ಡೀಲಿಯಾಗೆ ಸುದ್ದಿ ಕಳಿಸಿದ. ಅವಳ ಗಂಡ ಕೂಡಲೇ ಸೈನ್ಯ ಸಮೇತ ಹೋಗಿ ಗಾನೆರಿಲ್ ಮತ್ತು ರಿಗನ್ ರ ರಾಜ್ಯಗಳಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡ. ಅಷ್ಟರಲ್ಲಾಗಲೆ ಆ ಹೊಟ್ಟೆಕಿಚ್ಚಿನ ಅಕ್ಕ ತಂಗಿ ಒಬ್ಬರನ್ನೊಬ್ಬರು ಕೊಳ್ಳುವ ಸಂಚುಹೂಡಿ ತಮ್ಮ ಸಂಸಾರವನ್ನೇ ಹಾಳು  ಮಾಡಿಕೊಂಡಿದ್ದರು. ಇತ್ತ ಕಾರ್ಡೀಲಿಯಾ ನೆಚ್ಚಿನ ಅಪ್ಪನನ್ನ ಹುಡುಕಿಕೊಂಡು ಆಸ್ಪತ್ರೆಗೆ ಬಂದಳು. ಆದರೆ ಜ್ವರದ ಸನ್ನಿತಾಪದಲ್ಲಿದ್ದ ಕಿಂಗ್ ಲಿಯರ್ ಗೆ ಮಗಳ ಗುರುತೇ ಹತ್ತಲಿಲ್ಲ. ಮಗಳ ಕೈ ಹಿಡಿದು ಏನೇನೋ ಬಡಬಡಿಸುತ್ತ ಪ್ರಾಣಬಿಟ್ಟ. ಅಪ್ಪನೆದೆಗೆ ಒರಗಿ ಮಗಳೂ ಜೀವ ಬಿಟ್ಟಳು. ಹೇಗೆ ದುರಂತದಲ್ಲಿ ಕೊನೆಯಾಯಿತು ಪ್ರೀತಿಯ ಅಪ್ಪ-ಮಗಳ ಬದುಕು. ಭಾವ ಶುದ್ಧಿಯುಳ್ಳ ಕಿರಿತಲೆಮಾರಿನ ಎಳೆಯರಿಂದಲೂ ಹಿರಿತಲೆಮಾರಿನವರು ಅಮೂಲ್ಯವಾದ ಭಾವದ್ರವ್ಯ ಹಾಗೂ ಆಳವಾದ ಅರಿವನ್ನು ಹೀರಿಕೊಳ್ಳಬಹುದೆಂದು ಈ ನಾಟಕದಿಂದ ತಿಳಿಯಬಹುದು. ಪೌರ್ವಾತ್ಯರಾದ ಭಾರತೀಯರ ಮನಸ್ಸು ಸುಖಾಂತ ನಾಟಕವನ್ನು ಹೆಚ್ಚು ಇಷ್ಟಪಟ್ಟರೆ, ಪಾಶ್ಚಿಮಾತ್ಯರಾದ ಯುರೋಪಿಯನ್ನರ ಮನಸ್ಸು ದುಃಖಾಂತ ನಾಟಕವನ್ನೂ ಆಳವಾಗಿ ಆಸ್ವಾದಿಸುತ್ತದೆ. ಟ್ರ್ಯಾಜಿಡಿ ಆಸ್ವಾದಿಸಿದಾಕ್ಷಣ ಮನುಷ್ಯ ಇತ್ಯಾತ್ಮಕ(ಪಾಸಿಟಿವ್) ಮೌಲ್ಯ(ವ್ಯಾಲ್ಯೂ) ಗಳಲ್ಲಿ ನಂಬಿಕೆ ಕಳೆದುಕೊಳ್ಳಬೇಕೆಂದಿಲ್ಲ. ಬದುಕಿನ ಬಗ್ಗೆ ನಿರಾಶಾವಾದಿ ಧೋರಣೆ ತಳೆಯಬೇಕೆಂದಿಲ್ಲ. ಬದಲಿಗೆ ನಕಾರಾತ್ಮಕ (ನೆಗೆಟಿವ್) ತರಂಗಗಳು (ವೈಬ್ಸ್), ಅಹಂಕಾರ( ಇಗೊ), ಅವಿವೇಕ(ಫೂ ಲಿಶ್ ನೆಸ್), ದುಷ್ಟಸಹವಾಸ (ಬ್ಯಾಡ್ ಕಂಪನಿ),ಮೂಢನಂಬಿಕೆ(ಸೂಪರ್ ಸ್ಟಿಷನ್), ಭೀತಿ(ಫಿ ಯರ್) ಇತ್ಯಾದಿಗಳಿಂದ ದೂರ ಇರುವುದು ಹೇಗೆಂದು ಅರ್ಥಮಾಡಿಕೊಳ್ಳಬಹುದು; ನಮ್ಮನ್ನು ನಾವೇ ದುರಂತಕ್ಕೆ ಒಡ್ಡಿಕೊಳ್ಳಬಾರದೆಂಬ ಎಚ್ಚರಿಕೆ ರೂಢಿಸಿಕೊಳ್ಳಬಹುದು; ಒಟ್ಟಾರೆಯಾಗಿ ಬದುಕಿನ ಬಗ್ಗೆ ಸಾರವತ್ತಾಗಿ ಚಿಂತಿಸಬಹುದು.

**ಟೀಚರ್ಸ ಡೇ**

**ನಿಮ್ಮ ಮೂರ್ತಿ ತಾತ.**



ಸಂಚಿಕೆ ೯

ಸೆಪ್ಟೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್
rajanisomayaji@gmail.com